



# ಕಾಟ್ ಎಂಬ ಹಸಿರು 'ಮತ್ತು'

★ ಗೋಪಿ ಸಸಿತೋಟ





ಕೀನ್ಯಾದ ಮಸಾಯ್ ಮಾರಾ ನ್ಯಾಷನಲ್ ಪಾರ್ಕ್ ನೋಡುವ ತವಕದಿಂದ ರಾಜಧಾನಿ ನೈರೋಬಿಗೆ ಕಾಲಿಟ್ಟಿದ್ದೆ. ಅಲ್ಲಿಂದ ಮಸಾಯ್ ಮಾರಾಗೆ ವಿಮಾನದಲ್ಲಿ ಅರ್ಧ ತಾಸಿನ ಪಯಣ. ವಿಮಾನ ಹೊರಡಲು ಇನ್ನೂ 4–5 ಗಂಟೆ ಬಾಕಿಯಿದ್ದರಿಂದ ನಗರ ವೀಕ್ಷಣೆಗೆ ಹೊರಟೆ. ಪೂರ್ವ ಆಫ್ರಿಕಾ ದೇಶವಾದ ಕೀನ್ಯಾದ ಈ ನಗರ ಅಚ್ಚುಕಟ್ಟು. ವಾಣಿಜ್ಯದ ದೃಷ್ಟಿಯಿಂದ ಸಾಕಷ್ಟು ಅಭಿವೃದ್ಧಿ ಸಾಧಿಸಿದೆ. ಆದರೆ ಎಲ್ಲೆಂದರಲ್ಲಿ ಜನ ಕೈಯಲ್ಲಿ ಗಿಡದ ಟೊಂಗೆಯನ್ನು ಹಿಡಿದು ಎಲೆಗಳನ್ನು ಅಗಿಯುತ್ತಿದ್ದರು.

ಮಸಾಯ್ ಮಾರಾದಲ್ಲಿ ವೈಲ್ಡ್ ಬೀಸ್ಟ್‌ಗಳ 'ಬೃಹತ್ ವಲಸೆ' ಬಗ್ಗೆ ನ್ಯಾಷನಲ್ ಜಿಯಾಗ್ರಫಿಯಲ್ಲಿ ವೀಕ್ಷಿಸಿದ್ದೆ. ಲಕ್ಷಗಟ್ಟಲೆ ಸಂಖ್ಯೆಯಲ್ಲಿರುವ ವೈಲ್ಡ್ ಬೀಸ್ಟ್‌ಗಳು ಹುಲ್ಲುಗಾವಲಿ (ಸವನ್ನಾ) ನಲ್ಲಿ ಹುಲ್ಲು ಮೇಯ್ದಂತೆ ಕೀನ್ಯಾದ ನಿವಾಸಿಗಳು ಹಸಿ ಎಲೆ ಅಗಿಯುವುದು ನೋಡಿ ವಿಚಿತ್ರವೆನಿಸಿತು.

ಕಟವಾಯಿಯಿಂದ ಹಸಿರು ಜೊಲ್ಲು ಸುರಿಸುತ್ತ ಅಗಿಯುವ ಈ ಎಲೆಯ ಹೆಸರು ಕಾಟ್. ಸ್ಥಳಿಯ ಭಾಷೆಯಲ್ಲಿ 'ವೇವೆ' ಎನ್ನಲಾಗುವ ಇದರ ಎಲೆಯ ಜೊತೆ ಕಡ್ಡಿಯ ತುದಿ ಭಾಗವನ್ನೂ ಅಗಿದು ರಸವನ್ನಷ್ಟೇ ನುಂಗಿ ಕಸವನ್ನು ಉಗುಳುತ್ತಿದ್ದರು, ನಮ್ಮಲ್ಲಿಯ ರಸಗವಳದ ತರಹ. ಆದರೆ ವ್ಯತ್ಯಾಸವಿಷ್ಟೆ. ವೀಳ್ಯದೆಲೆಗೆ ಸುಣ್ಣ, ಅಡಿಕೆಚೂರು ಬೇಕು. ಈ ಎಲೆಗೆ ಇವ್ಯಾವುದರ ಸಾಥ್ ಬೇಕಿಲ್ಲ. ಎಲ್ಲೆಲ್ಲೂ ಫುಟ್‌ಪಾತ್ ಮೇಲೆ ಉಗುಳಿದ ಹಸಿರು ಮಡ್ಡಿಯ ರಾಶಿ. ಉಗುಳೂ ಹಸಿರು ಹಸಿರು. ಅಂತಹ ರುಚಿಯೂ ಇದಕ್ಕಿಲ್ಲ. ಆದರೆ ಇದರಲ್ಲಿರುವ ರಾಸಾಯನಿಕಗಳಾದ ಕ್ಯಾಥೈನ್ ಮತ್ತು ಕ್ಯಾಥಿನೋನ್ ಮೆದುಳಿಗೇ ಕೈ ಹಾಕುತ್ತವೆ. ಮತ್ತೇರಿ ಸುತ್ತಲಿರುವ ಜಗತ್ತೆಲ್ಲ ಆಹ್ಲಾದಕರವೆನಿಸುತ್ತಂತೆ. ಜೊತೆಗೆ ರೊಚ್ಚಿಗೆದ್ದ ಹೆಂಡತಿಯನ್ನು, ಸಿಟ್ಟಿಗೆದ್ದ ಬಾಸ್‌ನನ್ನು ಎದುರಿಸಲು ಹುಚ್ಚು ಧೈರ್ಯ! ಭಾವನೆಗಳು ಎರ್ರಾಬಿರ್ರಿಯಾಗಿ ಆಡಲು ಶುರು. 'ನಿದ್ದೆಗೆಡಬೇಕಾದರೆ ಇದನ್ನು ಅಗಿಯಬೇಕು. ಕಣ್ರೆಪ್ಪೆ ಬಾಗಿದರೆ ನೋಡಿ' ಎಂದು ಬಗಲಲ್ಲಿ ಕಡ್ಡಿಗಳ ಕಟ್ಟನ್ನಿಟ್ಟುಕೊಂಡು ಮಾರುವ ಹುಡುಗ ತಾರೀಫ್ ಮಾಡಿದ. ಅಡ್ಡ ಪರಿಣಾಮ? ದೀರ್ಘಾವಧಿ ಸೇವನೆಯಿಂದ ನಿದ್ರಾಹೀನತೆ, ಖಿನ್ನತೆ, ಹುಚ್ಚಿಗೆ ಹತ್ತಿರ ಹತ್ತಿರ, ಕ್ಯಾನ್ಸರ್.

ಆರೋಗ್ಯದ ಗೊಡವೆ ಈ ಕೀನ್ಯಾದವರಿಗಿಲ್ಲ. ನಿತ್ಯ ಹಲವಾರು ಕಡೆ 'ಕಾಟ್' ಪಾರ್ಟಿ ಇರುತ್ತಂತೆ. ಅಂದರೆ ಅಲ್ಲಿ ಸೇರಿದವರೆಲ್ಲ ತಡರಾತ್ರಿಯವರೆಗೆ ಎಲೆ ಅಗಿಯುತ್ತ ಕೂಡ್ರುವುದು. ಸರ್ಕಾರವೂ ಈ ಗಿಡಗಳನ್ನು ಬೆಳೆಯಲು ಭಾರಿ ಸವಲತ್ತು ನೀಡುತ್ತಿದೆ. ಸೊಮಾಲಿಯ, ಬ್ರಿಟನ್ನಿಗೆ ರಫ್ತು ಮಾಡಿ ಬೆಳೆಗಾರರು ಭರ್ಜರಿ ಹಣ ಸಂಪಾದಿಸುತ್ತಿದ್ದಾರೆ. ಸಾವಿರಾರು ಎಕರೆ ಪ್ರದರ್ಶನದಲ್ಲಿ ಇದನ್ನು ಬೆಳೆಯಲಾಗಿದೆ. ಕಾಟ್ ಸಾಧಾರಣ ಎತ್ತರದ ಮರವಾಗಿ ಬೆಳೆಯುತ್ತದೆ. ನೆಟ್ಟು 7–8 ವರ್ಷಗಳಾದ ಮೇಲೆ ತುದಿಯ ಟೊಂಗೆಗಳನ್ನು ಕತ್ತರಿಸಿ ಮಾರುತ್ತಾರೆ.